

ಕೊರೊನಾ ಸೋಂಕು ಗರ್ಭಿಣಿಯರನ್ನು ಭಯಭೀತರಾಗಿಸಿದೆ. ಅನೇಕರು ಸಾಮಾನ್ಯ ನೆಗಡಿ, ಕೆಮ್ಮು ಬಂದು ಮನೆಮದ್ದು ಮಾಡಿಕೊಂಡವರೂ ಭಯಭೀತರಾಗಿ ಫೋನ್ ಮಾಡಿ ಕೇಳುವ ವಿಚಾರ ಈಗ್ಗೆ ಕೆಲದಿನಗಳಿಂದ ಸಾಮಾನ್ಯವಾಗಿ ಬಿಟ್ಟಿದೆ. ಗರ್ಭಿಣಿಯರಲ್ಲಿ ವೈರಸ್ ಸೋಂಕು ತಗುಲದಂತೆ ಏನು ಮಾಡಬಹುದು? ಇಲ್ಲಿದೆ ಗರ್ಭಿಣಿಯರ ಕಾಳಜಿಗಾಗಿಯೇ ಇರುವ ವಿಶ್ಲೇಷಣಾತ್ಮಕ ಬರಹ.

■ **ಡಾ. ವೀಣಾ ಭಟ್, ಭದ್ರಾವತಿ**

# ಗರ್ಭಧಾರಣೆಯೂ ವೈರಸ್ ಸೋಂಕೂ...

ವೈರಾಣು ಸೋಂಕು ಗರ್ಭಿಣಿಯರನ್ನು ಭೀತಿಗೊಳಿಸುತ್ತಿದೆ. ಸಾಮಾನ್ಯ ಕೆಮ್ಮು, ನೆಗಡಿ ಬಂದರೂ ಇದು ಸೋಂಕಿನಿಂದಲೇ ಬಂದಿರಬಹುದು ಎಂಬ ಅನುಮಾನ ಕಾಡುವುದಲ್ಲದೆ ಹುಟ್ಟಲಿರುವ ಮಗುವಿನ ಗತಿಯೇನಪ್ಪಾ ಎಂಬ ತೀವ್ರ ಆತಂಕಕ್ಕೆ ಒಳಗಾಗುವಂತಾಗಿದೆ.

ಶೀತ, ಕೆಮ್ಮು, ಗಂಟಲುನೋವು ಆಗಾಗ್ಗೆ ಕಾಡುವ ತಲೆನೋವು ಇವಕ್ಕೆಲ್ಲಾ ಮನೆಯಲ್ಲಿಯೇ ಬಿಸಿನೀರು ಕುಡಿದು, ಉಪ್ಪುನೀರಿನಲ್ಲಿ ಬಾಯಿ ಮುಕ್ಕಳಿಸುತ್ತಾ, ಕೆಲವರು ಶುಂಠಿ, ಕಾಳುಮೆಣಸು ಇತ್ಯಾದಿ ಹಾಕಿ ಕಷಾಯ ಕುಡಿದು ಕಡಿಮೆ ಆಗದಿದ್ದರೆ ಬರುತ್ತಿದ್ದ ಗರ್ಭಿಣಿಯರೆಲ್ಲಾ ಈಗ ಕೊರೊನಾ ವೈರಸ್‌ನಿಂದ ಭಯಭೀತರಾಗಿದ್ದಾರೆ. ಅಷ್ಟೇ ಅಲ್ಲ, ಭಯಭೀತರಾಗಿ 'ನಾವೊಬ್ಬರಾದರೆ ಪರವಾಗಿಲ್ಲ, ನಾವಿಬ್ಬರ ಜೊತೆಗೆ ಮಗು ಬಗ್ಗೆಯೂ ಯೋಚಿಸಬೇಕಲ್ವಾ ಡಾಕ್ಟ್ರೇ' ಎಂದು ಫೋನ್ ಮಾಡಿಯೋ, ಇಲ್ಲ ಆಸ್ಪತ್ರೆಗೆ ಬಂದೇ ಬಿಡುವುದು ಸಾಮಾನ್ಯವಾಗಿ ಬಿಟ್ಟಿದೆ.

ಇದಕ್ಕೆ ಪೂರಕವಾಗಿ ಇತ್ತೀಚಿನ ಜಾಮಾ (ಎಂಬಂ) ಪತ್ರಿಕೆಯ ವರದಿ ಒಂದು ವುಹಾನ್‌ನಲ್ಲಿ ಜನವರಿ 31ಕ್ಕೆ ಗರ್ಭಿಣಿಗೆ ಸೋಂಕು ತಗುಲಿದ್ದು ಅವರಿಗೆ ಎಲ್ಲಾ ಮುಂಜಾಗ್ರತೆಗಳನ್ನು ಅನುಸರಿಸಲಾಗಿತ್ತು. ಆದರೂ ಫೆಬ್ರುವರಿ 22ಕ್ಕೆ ಮಗುವನ್ನು ಸಿಝೇರಿಯನ್ ಹೆರಿಗೆ ಮಾಡಿಸಲಾಯಿತು. ಹೆರಿಗೆಯಾಗಿ 2 ತಾಸಿನೊಳಗೆ ರಕ್ತಪರೀಕ್ಷೆ ಮಾಡಿದಾಗ ಆ ಮಗುವಿನಲ್ಲಿ ಕೊರೊನಾ ಸೋಂಕು ಇರುವುದು ದೃಢಪಟ್ಟಿದ್ದು ಭಯ ಆತಂಕವನ್ನು ಹೆಚ್ಚಿಸುವಂತೆ ಮಾಡುತ್ತದೆ. ಅಷ್ಟೇ ಅಲ್ಲ, ಗರ್ಭಧಾರಣೆಯಲ್ಲಿ ಸೋಂಕು, ಜ್ವರ, ಕೆಮ್ಮು ಯಾವುದೇ ರೀತಿಯ ಆರೋಗ್ಯದಲ್ಲಿ ಏರುಪೇರಾದರೂ ಆತಂಕವೇ ಹೆಚ್ಚಾಗುತ್ತದೆ. ಅದರಲ್ಲೂ ಇನ್ನೂ ನಿರ್ದಿಷ್ಟ ಚಿಕಿತ್ಸೆ ಸೂಚಿಸಲ್ಪಡದೇ ಇರುವ, ಲಸಿಕೆಯೂ ಲಭ್ಯವಿರದ ವೈರಸ್ ಸೋಂಕುಗಳ ಬಗ್ಗೆ ಇನ್ನೂ ಹೆಚ್ಚು ಭಯ, ಆತಂಕ. 2015ರಲ್ಲಿ ದಕ್ಷಿಣ ಅಮೆರಿಕ ದೇಶದಲ್ಲಿ ಸೊಳ್ಳೆಗಳಿಂದ ಹರಡಲ್ಪಟ್ಟ ಜೈಕಾ ವೈರಸ್ ಹುಟ್ಟುವ ಮಗುವಿನಲ್ಲಿ ಚಿಕ್ಕ ತಲೆಯುಳ್ಳ (ಮೈಕ್ರೋಕೆಫಾಲಿ) ಶಿಶುಗಳು ಜನನಕ್ಕೆ ಕಾರಣವಾಗಿದ್ದು ಹಲವು ಗರ್ಭಿಣಿಯರ ತಲೆಕೆಡಿಸಿತ್ತು.

## ಕಾಳಜಿ ಅಗತ್ಯ

ಅತ್ಯಂತ ಸೂಕ್ಷ್ಮಜೀವಿಗಳಾದ ಈ ವೈರಸ್‌ಗಳು ಸಾಮಾನ್ಯ ನೆಗಡಿ, ವಾಂತಿಭೇದಿ, ಫ್ಲೂನಿಂದ ಹಿಡಿದು ಹೆಚ್.ಐ.ವಿ ಸೋಂಕು ಸಹಿತವಾಗಿ ಈಗ ವಿಶ್ವವನ್ನೇ ಅಲ್ಲಾಡಿಸುತ್ತಿರುವ ಕೊರೊನಾ ಸೋಂಕಿನವರೆಗೆ ಹಲವು ಸೋಂಕುಗಳನ್ನುಂಟು ಮಾಡುತ್ತಿದೆ. ಆದ್ದರಿಂದ ಯಾವುದೇ ಸೋಂಕಿರಲಿ ಗರ್ಭಿಣಿಯರಲ್ಲಿ ರೋಗ ಹರಡುವ ಸಂಭವ ಹೆಚ್ಚಿರುವುದರಿಂದ ಕಾಳಜಿಯಿಂದ ಇರುವುದು ಅತ್ಯಗತ್ಯ.

ಇನ್ನು ಗರ್ಭಿಣಿಯರಲ್ಲಿ ಸೋಂಕಾದಾಗ ಮಕ್ಕಳಲ್ಲಿಯೂ ಹಲವು ಜನ್ಮಜಾತ ವೈಕಲ್ಯಗಳನ್ನುಂಟುಮಾಡುವ ಹಲವು ವೈರಸ್ ಸೋಂಕುಗಳಿವೆ. ಮುಖ್ಯವಾಗಿ ರುಬೆಲ್ಲಾ ಸಿ.ಎಂ.ವಿ ವೈರಸ್, ಹರ್ಪಿಸ್, ಹೆಪಟೈಟಿಸ್ ಮತ್ತು ಹೆಚ್.ಐ.ವಿ ಇತ್ಯಾದಿ ಈ ಎಲ್ಲಾ ವೈರಸ್ ಸೋಂಕುಗಳನ್ನು ಇನ್ನೊಂದು ಪರಾವಲಂಬಿ ಜೀವಿಯಾದ ಟಾಕ್ಸೋಪ್ಲಾಸ್ಮಾ ಸೋಂಕಿನೊಂದಿಗೆ ಸೇರಿಸಿ ಅದನ್ನು Torch ಸೋಂಕು (ಟಾಕ್ಸೋಪ್ಲಾಸ್ಮಾ ರುಬೆಲ್ಲಾ, ಸೈಟೋಮೆಗಾಲೋವೈರಸ್ ಸೋಂಕು, ಹರ್ಪಿಸ್ ಸೋಂಕು) ಎಂದು ಪರಿಣಿಸುತ್ತಾರೆ. ಟಾಕ್ಸೋಪ್ಲಾಸ್ಮಾ ಬೆಕ್ಕಿನ ಮಲದಿಂದ ಕಲುಷಿತ ಆಹಾರ ಅಥವಾ ಹಸಿಮಾಂಸ ಸೇವನೆಯಿಂದ ಉಂಟಾಗುವ ಟಾಕ್ಸೋಪ್ಲಾಸ್ಮಾಗೊನಿಡಿ ಎಂಬ ಪರಾವಲಂಬಿಜೀವಿ ಸೋಂಕು ಗರ್ಭಿಣಿಯರಲ್ಲಿಯೂ ಜ್ವರ, ಗಂಟಲುನೋವು, ಮೈಕೈ ನೋವು, ದುಗ್ಧರಸಗ್ರಂಥಿ ಹಿಗ್ಗುವಿಕೆ, ಇತ್ಯಾದಿ ಉಂಟುಮಾಡಿ, ಮಗುವಿನಲ್ಲಿ ದೃಷ್ಟಿದೋಷ, ಹೈಡ್ರೋಕೆಫಾಲಸ್ (ದೊಡ್ಡತಲೆ) ಬುದ್ಧಿಮಾಂದ್ಯತೆ, ಕಿವುಡುತನ, ಅಪಸ್ಮಾರಗಳನ್ನುಂಟು ಮಾಡಬಹುದು. ವೈದ್ಯರ ಸಲಹೆಯ ಮೇರೆಗೆ ನಿರ್ದಿಷ್ಟ ಚಿಕಿತ್ಸೆ ತೆಗೆದುಕೊಳ್ಳಬೇಕು.

ರುಬೆಲ್ಲಾ ಸೋಂಕು (ಜರ್ಮನ್ ಮೀಸಲ್ಸ್) ಗಾಳಿಯಿಂದ ಹರಡುತ್ತದೆ. ಮೊದಲು ಜ್ವರ,